Sri B. D. JATTI:—If really it is necessary the Government of Mysore will represent to the Government of India and will see that we get more quota.

ಶ್ರೀ ಬಿ. ಡಿ. ದೇವೇಂದ್ರಪ್ಪ.—ಸಚಿವರ ಉತ್ತರದಲ್ಲಿ ಸಕ್ಕರೆಗಿಂತ ಅಗ್ಗವಾಗಿರುವ ಬೆಲ್ಲವು ಗ್ರಾಮಾಂತರ ಪ್ರದೇಶಗಳಲ್ಲಿ ಸುಲಭವಾಗಿ ದೊರಕುವುದರಿಂದ ಅಲ್ಲಿ ಸಕ್ಕರೆ ಕೊಡತಕ್ಕ ಅವಶ್ಯಕತೆ ಅಷ್ಟಾಗಿ ಇಲ್ಲ ಎಂದು ಹೇಳಿದ್ದಾರೆ ; ಗ್ರಾಮಾಂತರದಲ್ಲಿ ಬೆಲ್ಲದ ಧಾರಣೆ 40 ಸೇರಿಗೆ 10 ರೂಪಾಯಿ ಜಾಸ್ತಿಯಾಗಿದೆ. ಆದ್ದರಿಂದ ಸಕ್ಕರೆಯನ್ನು ಪಟ್ಟಣಗಳಿಗೆ ಎಷ್ಟು ಮಟ್ಟಿಗೆ ಕೊಡುತ್ತಿರೋ ಅಷ್ಟೇ ಪ್ರಮಾಣವನ್ನು ಗ್ರಾಮಾಂತರಗಳಿಗೂ ಕೊಡತಕ್ಕ ವ್ಯವಸ್ಥೆಯನ್ನು ಮಾಡುವುದು ಸರಿ ಎಂದು ಹೇಳುತ್ತೇನೆ. ಅದು ಸರಿಯಾದದ್ದಲ್ಲವೇ ?

Sri B. D. JATTI.—The suggestion deserves consideration.

ಶ್ರೀ ಎಸ್. ಗೋಪಾಲಗೌಡ.—ಸಿವಿರ್ ಸಪ್ಲೈ ಖಾತೆಯನ್ನು ನಾವು ತೆಗೆದುಕೊಂಡ ಮೇರೆ ಸಕ್ಕರೆ ವ್ಯಾಪಾರದಲ್ಲಿ ನಡೆದುಕೊಂಡು ಬಂದಿರತಕ್ಕ ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ತಾವು ಕ್ರಮ ತೆಗೆದುಕೊಂಡಿದ್ದಿರಾ ?

Mr. SPEAKER.—It is disallowed. How does it arise here ? The member may put a separate question and the Chair will allow it.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಮಗಾಗಲಿ, ತಮ್ಮ ಮಂತ್ರಿಮಂಡಲದಲ್ಲಿ ಯಾರಿಗೇ ಆಗಲಿ ಈ ಸುಗರ್ ಕಂಪ್ಲೇಟ್ ಬಂದಿದೆಯೇ ? (ನಗು!) ಜನರಿಂದ. ಈ ಬಗ್ಗೆ ಏನಾದರೂ ಆಪಾದನೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ.

Fisheries Co-operative Societies.

*Q.—79. Sri B. BHASKAR SHETTY (Kaup).—

Will the Government be pleased to state :—

(*a*) which are all the fisheries private and co-operative societies which have got Government help in the way of subsidy and loans during the past 3 years ;

(*b*) what is the total amount paid to each of these by way of subsidy and loans ?

A.—Sri B. RACHAIAH (Minister for Forests and Fisheries).—

(*a*) *Vide* statements placed on the Table of the House.‡

(*b*) Loan Rs. 17,87,215-80. Subsidy 19,231-87.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಂಜನ್ಸ್‌ಗೆ ರೋನ್ ಕೊಡುವಾಗ ತಮ್ಮ ಉತ್ತರದಲ್ಲಿ ಸ್ಟೇಟ್‌ಮೆಂಟ್ 1 ನಂಬರ್ 2 ರಲ್ಲಿ 1962-63ರಲ್ಲಿ ಕರ್ಕೇರಾ ಅಂಡ್ ಪಾರ್ಟಿಯವರಿಗೆ 55 ಸಾವಿರ ರೂಪಾಯಿಗಳ ರೋನ್ ಕೊಡಲಾಗಿದೆ ಎಂದು ಹೇಳಿದ್ದೀರಿ. ಈ ಸಾಲವನ್ನು ಯಾವ ಉದ್ದೇಶಕ್ಕೆ ಕೊಟ್ಟಿದ್ದೀರೋ ಆ ಉದ್ದೇಶ ಫಲಕಾರಿಯಾಗಿದೆಯೇ ಎಂದು ಕೇಳುತ್ತೇನೆ.

---

‡Copy placed in the Mysore Legislature Library *Vide* No. 1, dated 29th January 1966.

†Sri B. RACHAIAH.—There are so many parties who have been given these loans and subsidies. Initially, there was some difficulty in getting the boat constructed. They have now constructed.

Sri G. V. GOWDA.—Has it come to the notice of the Government that the particular gentleman has utilised that amount for construction of a house instead of a boat ?

Sri B. RACHAIAH.—Government is not aware of it.

ಶ್ರೀ ಎ. ಕೃಷ್ಣಶೆಟ್ಟಿ.—ಮಲ್ಪೆಯಲ್ಲಿರುವ ಐಸ್ ಫ್ಯಾಕ್ಟರಿಗೆ ಬಿಲ್ಡಿಂಗ್ ಸಬ್ಸಿಡಿ ಎಷ್ಟು ಕೊಟ್ಟಿದ್ದೀರಿ ?

Sri B. RACHAIAH.—For building Ice Factory according to rules whatever they are entitled to, they will get.

ಶ್ರೀ ಬಿ. ಭಾಸ್ಕರಶೆಟ್ಟಿ.—ಕರ್ಕೆರಾ ಅಂಡ್ ಪಾರ್ಟಿಯವರಿಗೆ 55 ಸಾವಿರ ರೂಪಾಯಿಗಳನ್ನು ಕೊಡುವಾಗ ತಾವು ಯಾವ ಜಾಮೀನಾರಿ ಇಲ್ಲವೆ ಅಂದರೆ ಯಾವ ಸೆಕ್ಯೂರಿಟಿ ಇಲ್ಲದೇ ಕೊಟ್ಟಿದ್ದೀರ ? ಯಾವ ಸೆಕ್ಯೂರಿಟಿಯೂ ಇಲ್ಲದೇ 55 ಸಾವಿರ ರೂಪಾಯಿಗಳನ್ನು ಹೇಗೆ ಕೊಟ್ಟಿರಿ ?

ಶ್ರೀ ಬಿ. ರಾಚಯ್ಯ.—ಸರ್ಕಾರದ ಹಣ ವಾಪಸು ಪಡೆಯುವುದಕ್ಕೆ ಯಾವ್ಯಾವ ಸೆಕ್ಯೂರಿಟಿ ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಹಣ ಕೊಟ್ಟಿರುವುದಕ್ಕೆ ಉದ್ದೇಶ ಸಫಲವಾಗದೆ ಹಾಗೂ ಹಣವೂ ವಾಪಸಾಗದೇ ಇದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಇಲ್ಲ, ಸ್ವಾಮಿ.

ಶ್ರೀ ಎ. ಕೃಷ್ಣಶೆಟ್ಟಿ.—ಬಿಲ್ಡಿಂಗ್ ಸಬ್‌ಸಿಡಿ ಕೊಟ್ಟಿದ್ದು ಉಂಟೆ ? ಕೊಟ್ಟಿದ್ದರೆ ಎಷ್ಟು ಹಣ ಕೊಟ್ಟಿದ್ದೀರಿ ?

ಶ್ರೀ ಬಿ. ರಾಚಯ್ಯ.—ನೋಟೀಸ್. If a separate question is asked, I will answer.

ಶ್ರೀ ಕೆ. ಲಕ್ಕಪ್ಪ.—ಐವತ್ತು ಸಾವಿರ ರೂಪಾಯಿ ಒಬ್ಬರಿಗೇ ಕೊಟ್ಟಿರುವುದಕ್ಕೆ ಇರತಕ್ಕ ಅಂಥ ಪ್ರಬಲ ಕಾರಣವೇನು ? ಹಣ ಕೊಡುವಾಗ್ಗೆ ಸೆಕ್ಯೂರಿಟಿ ತೆಗೆದುಕೊಂಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? The question is why the security is not taken properly.

Mr. SPEAKER.—What is the nature of the Security that is usually taken and not taken in this Case ?

ಶ್ರೀ ಕೆ. ಲಕ್ಕಪ್ಪ.—ಸೆಕ್ಯುರಿಟಿ ಸರಿಯಾಗಿ ತೆಗೆದುಕೊಳ್ಳದೆ ಐವತ್ತು ಸಾವಿರ ರೂಪಾಯಿ ಹಣ ಒಬ್ಬರಿಗೆ ಕೊಡುವುದಕ್ಕೆ ಇರತಕ್ಕ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಒಂದು ಬೋಟು ಕಟ್ಟುವುದಕ್ಕೆ ಸುಮಾರು 45 ಸಾವಿರ ರೂಪಾಯಿ ಆಗುತ್ತದೆ. ಲೋನ್ ಕೊಡತಕ್ಕ ಸಂದರ್ಭದಲ್ಲಿ ಆಯಾಯ ಜನರ ಕ್ಯಾಪಾಸಿಟಿಗೆ ತಕ್ಕಂತೆ ಕೊಟ್ಟಿದೆ. ಬೇರೆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಕೆ. ಲಕ್ಕಪ್ಪ.—ಎಷ್ಟು ರೂಪಾಯಿ ಕೊಡಬೇಕೆಂದು ಸಾಲಕ್ಕೆ ಅರ್ಜಿ ಮಾಡಿದ್ದಾರೆ ?

Sri B. RACHAIAH.—That is not available.

ಶ್ರೀ ಬಿ. ಭಾಸ್ಕರಶೆಟ್ಟಿ.—ಫಾರೀನ್‌ನ ದ ಎಂಜಿನ್ಸ್ ತರಿಸುತ್ತೇವೆಂದು ಹೇಳಿದ್ದರಿಂದ ಯಾವ ಸೆಕ್ಯೂರಿಟಿ ತೆಗೆದುಕೊಳ್ಳದೆ 55 ಸಾವಿರ ರೂಪಾಯಿ ಸಾಲ ಕೊಟ್ಟಿದ್ದೀರಾ ? ಎಂಜಿನ್ ತಾನುತ್ತೇವೆಂದು ಹೇಳಿ ಹಣ ತೆಗೆದುಕೊಂಡು ಆ ಹಣವಿಂದ ಹೆಂಚತಿಯು ಹೆಸರಿನಲ್ಲಿ ಮನೆ ಕಟ್ಟಿಸಿಕೊಂಡಿದ್ದಾರೆ. ಹಣ ಒಂದು ಪೈ ಸಹ ವಸೂಲಾಗಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಈಗ ತಿಳಿಸಿದ ವಿಚಾರ ಕೇಳಿದ್ದೇನೆ. ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅಂಥ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಐವತ್ತು ಸಾವಿರ ರೂಪಾಯಿ ಕೊಡಬೇಕಾದರೆ ಜಮೀನು, ಬ್ಯಾಂಕ್ ಗ್ಯಾರಂಟಿ, ಮನೆ ಅಥವಾ ಏನಾದರೂ ಸೆಕ್ಯೂರಿಟಿ ಇದೆ ಏನು ?

ಶ್ರೀ ಬಿ. ರಾಚಯ್ಯ.—ಈ ಕರಕೇರಿ ಟ್ರೇನಿಂಗ್ ಸೆಂಟರಿನಲ್ಲಿ ತರಬೇತಿ ಪಡೆದ ನಾಲ್ಕು ಜನ ಟ್ರೇನೀಗಳಿಗೆ ಒಂದೊಂದು ಬೋಟು ಕೊಡುವುದಕ್ಕೆ ಅವಕಾಶ ಇದೆ. ಇಂಥ ಸಂದರ್ಭದಲ್ಲಿ ಪರ್ಸನಲ್ ಸೆಕ್ಯೂರಿಟಿ ಕೋಲ್ಡಾಟರ್ ಸೆಕ್ಯೂರಿಟಿ ತೆಗೆದುಕೊಳ್ಳುತ್ತಾರೆ. ಈಗ ಮಾನ್ಯ ಸದಸ್ಯರು ಹೇಳಿದ ವಿಚಾರದ ಬಗ್ಗೆ ತನಿಖೆ ನಡೆಸುತ್ತೇನೆ, ಹಾಗೂ ಹಣ ವಸೂಲ್ಮಾಡಲು ತಕ್ಕ ಕ್ರಮ ತಗೆದು ಕೊಳ್ಳುತ್ತೇನೆ.

ಶ್ರೀ ಬಿ. ಎಲ್. ಗೌಡ.—ತಿರಿಯೂರು ತಾಲ್ಲೂಕು ವಾಣಿವಿಲಾಸ ಸಾಗರಕ್ಕೆ ಮೆಷಿನರಿ ಕೊಡುವು ದಕ್ಕೋಸ್ಕರ ಅರ್ಜಿ ಕೊಟ್ಟು ಒಂದು ವರ್ಷವಾಯಿತು. ಅದರ ಬಗ್ಗೆ ಏನು ಕ್ರಮ ತಗೆದು ಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕೋರ್ಡ್ ಸ್ಟೋರೇಜ್ ಒದಗಿಸುವುದು ಮಂಜೂರು ಆಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೋರ್ಡ್ ಸ್ಟೋರೇಜ್ ಯಂತ್ರ ಒದಗಿಸಲು ಬಂದಿರತಕ್ಕ ಅರ್ಜಿಗಳು ಎಷ್ಟು ? ದೊಡ್ಡ ದೊಡ್ಡವರಿಗೆ ಮಾತ್ರ ಕೊಟ್ಟುಬಿಟ್ಟಿದ್ದೀರಿ. ಸಾಮಾನ್ಯರಿಗೆ ಕೊಟ್ಟಿಲ್ಲ. ಅದಕ್ಕೆ ಕಾರಣವೇನು ! ಸದಸ್ಯರಿಗೆ ಪ್ರಭಾವ ಬೀರುವಂಥವರಿಗೆ ಮಾತ್ರ ಕೊಟ್ಟಿದ್ದೀರಲ್ಲವೇ ?

Mr. SPEAKER.—The question is disallowed.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದಿಂದ ದೊರೆಯುವ ಸಾಲ ಈ ಮನೆಯ ಸದಸ್ಯರಿಗೆ ಪ್ರಭಾವವಂತರಾದವರಿಗೆ ಆಷ್ಟೇ ಸಿಕ್ಕುತ್ತದೆ, ಇದಕ್ಕೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಸ್ವಾಮಿ, ಸಾಲ ಪಡೆದವರ ಈ ಉದ್ದವಾದ ಪಟ್ಟಿ ನೋಡಿದರೆ ಅದರಲ್ಲಿ ಸಾಮಾನ್ಯ ಜನ ಎಷ್ಟು ಇದ್ದಾರೆ. ಈ ಸಭೆ ಸದಸ್ಯರು ಎಷ್ಟು ಇದ್ದಾರೆ ಎನ್ನುವುದು ತಾನೇ ಗೊತ್ತಾಗುತ್ತದೆ. ಪಟ್ಟಿ ನೋಡಬೇಕು. ವಿಷಯ ಸರಿಯಾಗಿ ತಿಳಿದುಕೊಳ್ಳದೆ ಮಾತನಾಡಬಾರದು.

ಶ್ರೀ ಬಿ. ಬಾಸ್ಕರಶೆಟ್ಟಿ.—ಹೋದ ವರ್ಷ ಐಸ್ ಪ್ಲಾಂಟಿಗೆ 40 ಸಾವಿರ ಲೋನ್ ಕೊಟ್ಟಿದ್ದೀರಿ. ಇದರಲ್ಲಿ ಬಿಲ್ಡಿಂಗ್ ಸಬ್ಸಿಡಿ ತೋರಿಸಿಲ್ಲ ; ಇದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಕಳೆದ ಮೂರು ವರ್ಷದ ವಿಚಾರ ಪ್ರಶ್ನೆಯಲ್ಲಿ ಕೇಳಿದ್ದರಿಂದ 1962 ರಿಂದ 1965 ನೇ ಇಸವಿ ವರೆಗೆ ವಿಷಯ ಬಂದಿವೆ. ಆದುದರಿಂದ ಅದನ್ನು ವಿಚಾರಿಸುತ್ತೇನೆ.

Mr. SPEAKER.—Since the Hon. Minister Sri D. Devaraj Urs is absent, Question No. 11 is held over.

Class 'A' Contractors Registered.

*Q. 118. Sri K. LAKKAPPA (Hebbur).—

Will the Government be pleased to state :—

the number of Class 'A' Contractors registered in the State ?

A.—Sri G. B. SHANKAR RAO (Parliamentary Secretary to the Minister for Public Works).

155 Contractors as on 31-3-1965.

ಶ್ರೀ ಕೆ. ಲಕ್ಕಪ್ಪ —'ಎ' ಕ್ಲಾಸ್ ಕಂಟ್ರಾಕ್ಟರ್ ಆಗಬೇಕಾದರೆ ಅರ್ಹತೆ ಏನು ಇರಬೇಕು, ಸ್ವಾಮಿ ?

Sri G. B. SHANKAR RAO.—'A' Class contractor should have atleast..... .....

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕನ್ನಡದಲ್ಲಿ ಪ್ರಶ್ನೆ ಕೇಳಿದರೆ ಉತ್ತರ ಇಂಗ್ಲೀಷಿನಲ್ಲಿ ಹೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ! I do not know the reason.